ಓ ಎಸ್ ನಂ.35/2021

ಪಿ.ಡಬ್ಲ್ಯೂ-1 ರುಕ್ಮಾಬಾಯಿ ಗಂಡ ಮಾರುತಿ ಕೋಳೆಕಾರ

**(ಇಂದು ದಿನಾಂಕಃ 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ೫ ಮತ್ತು ೮ನೇ ಪ್ರತಿವಾದಿಗಳ ಪರ ಶ್ರೀ ಸಿ ಎಸ್ ಹೆಚ್ ವಕೀಲರಿಂದ.

ಸರ್ವೆ ನಂಬರ ೩೫೫/೫ ರ ೮ ಎಕರೆ ೨೯ ಗುಂಟೆ ಜಮೀನು ೧ನೇ ಪ್ರತಿವಾದಿ ಖರೀದಿ ಮಾಡಿದ ಜಮೀನು ಎಂದರೆ ಸರಿಯಲ್ಲ. ಸಾಕ್ಷಿಯು ಅದು ನಮ್ಮ ತಂದೆಯ ಜಮೀನು ಇರುತ್ತದೆ ಎನ್ನುತ್ತಾರೆ. ಸದರಿ ಜಮೀನಿನಲ್ಲಿ ೩ ಎಕರೆ ೨೦ ಗುಂಟೆ ಜಮೀನನ್ನು ೧ನೇ ಪ್ರತಿವಾದಿ ೨ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಗಂಡ-ಹೆಂಡತಿಗೆ ಜಮೀನು ಹೇಗೆ ಮಾರುತ್ತಾರೆ ? ನಾನು ಕೇಸು ಹಾಕಿದ ಮೇಲೆ ಆ ರೀತಿ ಸುಳ್ಳು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ೧ನೇ ಪ್ರತಿವಾದಿ ಮತ್ತು ನನ್ನ ನಡುವೆ ಮೊದಲೆ ಪಾಲು ಆಗಿದೆ ಎಂದರೆ ಸರಿಯಲ್ಲ. ನಾನು ರೂ.೫,೦೦,೦೦೦/- ಹಣ ಪಡೆದು, ೧ನೇ ಪ್ರತಿವಾದಿಗೆ ನನ್ನ ಹಕ್ಕು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ೨ನೇ ಪ್ರತಿವಾದಿ ೮ನೇ ಪ್ರತಿವಾದಿಗೆ ೩ ಎಕರೆ ೩೦ ಗುಂಟೆ ಜಮೀನು ಮಾರಿರುತ್ತಾರೆ ಎಂದರೆ ಸಾಕ್ಷಿಯು ನಾನು ಕೇಸು ಹಾಕಿದ ಮೇಲೆ ನನಗೆ ಜಮೀನು ಕೊಡಬಾರದು ಎಂದು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ.

೨. ಸರ್ವೆ ನಂಬರ ೩೪೦/೨ ರಲ್ಲಿ ೮ ಎಕರೆ ಜಮೀನು ೨ನೇ ಪ್ರತಿವಾದಿ ೫ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ೫ನೇ ಪ್ರತಿವಾದಿ ೨ನೇ ಪ್ರತಿವಾದಿಯ ತಂಗಿಯಾಗಿದ್ದು, ನನಗೆ ಜಮೀನು ಕೊಡಬಾರದು ಎಂಬ ಉದ್ದೇಶದಿಂದ ನಾನು ಕೇಸು ಹಾಕಿದ ಮೇಲೆ ಆ ರೀತಿ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ೫ ಮತ್ತು

೮ನೇ ಪ್ರತಿವಾದಿಗಳು ೨ನೇ ಪ್ರತಿವಾದಿಯ ಪಾಲಿಗೆ ಬಂದ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು ನಮ್ಮ ತಂದೆಯ ಆಸ್ತಿ ಇರುತ್ತದೆ ಎನ್ನುತ್ತಾರೆ. ಖರೀದಿ ಪತ್ರಗಳನ್ನು ರದ್ದುಪಡಿಸುವಂತೆ ನಾನು ಕೇಳಿರುತ್ತೇನೆ. ೫ ಮತ್ತು ೮ನೇ ಪ್ರತಿವಾದಿಗಳ ಹೆಸರಿನಲ್ಲಿ ಪಹಣಿಗಳು ಆಗಿರುವುದನ್ನು ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಕೇಸು ಹಾಕಿರುತ್ತೇನೆ ಎನ್ನುತ್ತಾರೆ. ೨ನೇ ಪ್ರತಿವಾದಿ ಮಾಲೀಕರಾಗಿ ಇದ್ದುದನ್ನು ನೋಡಿ ೫ ಮತ್ತು ೮ನೇ ಪ್ರತಿವಾದಿಗಳು ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೆ ಪಾಲು ಆಗಿರುವುದಿಲ್ಲ ಎನ್ನುತ್ತಾರೆ. ನನ್ನ ಮತ್ತು ೧ನೇ ಪ್ರತಿವಾದಿಯ ಮದ್ಯ ಪಾಲು ಆಗಿದ್ದರೂ ಸಹ ನಾನು ಆಗಿರುವುದಿಲ್ಲ ಎಂದು ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.